ಇ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ನೀಲಗಿರಿ ಬೆಳೆಯಿಂದ ಪರಿಸರಕ್ಕೆ ಮಾರಕವಾಗುತ್ತಿರುವುದಕ್ಕೆ ಯಾವುದೇ ವೈಜ್ಞಾನಿಕ ಆಧಾರಗಳಿಲ್ಲ.

ಆ) ಈ ಬಗ್ಗೆ Overseas Development Agencies of United Kingdom (ODA) ನೆರವಿನಿಂದ "Effect of Fast Growing Species in Karnataka" ಎಂಬ ಸಂಶೋಧನೆಯನ್ನು ಬ್ರಿಟನ್ ದೇಶದಲ್ಲಿರುವ Oxford Forestry Institute ಮತ್ತು Institute of Hydrology, Wallingford ಎಂಬ ಸಂಸ್ಥೆಗಳ ತಾಂತ್ರಿಕ ಸಲಹೆ ಮತ್ತು ಸಹಕಾರದೊಡನೆ ಅಂತರ್ಜಲದ ಮಟ್ಟದ ಬಗ್ಗೆ ಅಧ್ಯಯನವನ್ನು ಮಾಡಿದ್ದು, ಅದರ ಮುಖ್ಯಾಂಶಗಳು ಕೆಳಕಂಡಂತಿವೆ.

1) ಒಣ ಪ್ರದೇಶದಲ್ಲಿ ಮಧ್ಯಮ ಮಣ್ಣಿನ ಆಳ ಇರುವೆಡೆ ನೀಲಗಿರಿ ನೆಡುತೋಪುಗಳಿಂದ ನೀರಿನ ಬಳಕೆಯ ಸ್ಥಳೀಯ ಶುಷ್ಕ ಎಲೆ ಉದುರಿಸುವ ಕಾಡಿಗಿಂತ ಹೆಚ್ಚೇನಿರುವುದಿಲ್ಲ.
2) ಈ ಸ್ಥಳಗಳಲ್ಲಿ ನೀಲಗಿರಿ ಮತ್ತು ಸ್ಥಳೀಯ ಕಾಡಿನ ನೀರಿನ ಬಳಕೆಯು ವಾರ್ಷಿಕ ಮಳೆಗೆ ಸಮನಾಗಿರುತ್ತದೆ.
3) ಅಧ್ಯಯನ ನಡೆಸಿದ ಸ್ಥಳಗಳಲ್ಲಿ ಜಲ ಮಟ್ಟದಿಂದ ನೀಲಗಿರಿ ಮರಗಳು ನೀರನ್ನು ಸೆಳೆದಿರುವುದಕ್ಕೆ ಯಾವುದೇ ಸಾಕ್ಷಾಧಾರಗಳಿಲ್ಲ.

ಇ) ಅರಣ್ಯ ಇಲಾಖೆಯು, ನೀಲಗಿರಿ ಸಸಿ ನೆಡೆಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದು, ರೈತರಿಗೆ ನೀಲಗಿರಿ ಸಸಿಗಳನ್ನು ಸರಬರಾಜು ಮಾಡುತ್ತಿಲ್ಲ.

760 ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ನಾಗರೀಕರಿಗೆ ಪ್ರಸ್ತುತ ಸರ್ಕಾರವು ಒದಗಿಸುತ್ತಿರುವ ಕುಡಿಯುವ ನೀರಿನ ದೈನಂದಿನ ಪ್ರಮಾಣವೆಷ್ಟು?

ಆ) ಪ್ರತಿ ನಾಗರೀಕರಿಗೆ ಅವಶ್ಯವಿರುವ ನೀರಿನ ಪ್ರಮಾಣವೆಷ್ಟು, ಅಂದಾಜು ಮಾಡಲಾದ ಮಾನದಂಡ ಯಾವುದು?

ಇ) ಕೊರತೆಯುಂಟಾಗುವ ನೀರಿನ ಪ್ರಮಾಣವನ್ನು ಸರಿದೂಗಿಸಲು ಕೈಗೊಂಡ ಕ್ರಮಗಳು ಯಾವುವು?

ಈ) ಹೊಸ ಯೋಜನೆಗಳನ್ನು ರೂಪಿಸಲಾಗಿದೆಯೇ, ರೂಪಿಸಿದ್ದಲಿ ವಿವರ ಒದಗಿಸುವುದು?

ಉ) ಹೊಸ ಯೋಜನೆಗಳನ್ನು ಕಾರ್ಯಾನುಷ್ಠಾನಕ್ಕೆ ತರಲು ತಗಲುವ ಅಂದಾಜು ವೆಚ್ಚವೆಷ್ಟು, ಅದನ್ನು ಯಾವ ಮೂಲದಲ್ಲಿ ಭರಿಸಲಾಗುವುದು? (ವಿವರ ನೀಡುವುದು)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಬೆಂಗಳೂರಿನ ನಾಗರೀಕರಿಗೆ ಪ್ರಸ್ತುತ ಸರಾಸರಿ–110 ಲೀಟರನಷ್ಟು ಕುಡಿಯುವ ನೀರನ್ನು ದಿನಂಪ್ರತಿ ಒದಗಿಸಲಾಗುತ್ತಿದೆ.

ಆ) ಭಾರತ ಸರ್ಕಾರದ ಸಂಸ್ಥೆ CPHEEO ನಿಗದಿಪಡಿಸಿದ ಪ್ರಕಾರ ಪ್ರತಿ ನಾಗರೀಕರಿಗೆ ದಿನಂಪ್ರತಿ 135 ಲೀಟರ್ ನೀರು ಅವಶ್ಯವಿರುತ್ತದೆ.

ಇ)

1) ಸರಾಸರಿ ಪ್ರತಿದಿನ 80 ದಶಲಕ್ಷ ಲೀಟರ್ ನೀರನ್ನು ಹೆಚ್ಚುವರಿಯಾಗಿ ಪಂಪ್ ಮಾಡಿ ನಗರಕ್ಕೆ ಸರಬರಾಜು ಮಾಡಲಾಗುತ್ತಿದೆ.
2) ತ್ವರಿತ ಪರಿಹಾರಕ್ಕಾಗಿ 1390 ಕೊಳವೆ ಬಾವಿಗಳನ್ನು ಹೊಸದಾಗಿ ಕೊರೆದು ಅವುಗಳಿಂದ ನೀರು ಸರಬರಾಜು ಮಾಡಲಾಗುತ್ತಿರುತ್ತದೆ.
3) ಇದೇ ರೀತಿ ಮತ್ತಷ್ಟು ನೀರು ಸರಬರಾಜು ಮಾಡಲು 1000 ಕೊಳವೆ ಬಾವಿಗಳನ್ನು ಕೊರೆಯಲು ದರಖಾಸ್ತು ಪ್ರಕ್ರಿಯೆ ಪ್ರಗತಿಯಲ್ಲಿದೆ.

ಈ) ದಿನಂಪ್ರತಿ 500 ದಶ ಲಕ್ಷ ಲೀಟರ್ ನೀರು ಹೆಚ್ಚುವರಿಯಾಗಿ ಕಾವೇರಿ 4ನೇ ಹಂತ, 2ನೇ ಘಟ್ಟದಿಂದ ಸರಬರಾಜು ಮಾಡಲು ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

1000 ಹೊಸ ಕೊಳವೆ ಬಾವಿಗಳನ್ನು ಕೊರೆಯಲು ದರಖಾಸ್ತು ಪ್ರಕ್ರಿಯೆ ನಡೆಯುತ್ತಿದೆ.

ಉ) ಕಾವೇರಿ 4ನೇ ಹಂತದ 2ನೇ ಘಟ್ಟದ ನೀರು ಸರಬರಾಜು ಯೋಜನೆಗೆ ಜಪಾನ್ ಇಂಟರ್‌ನ್ಯಾಷನಲ್ ಕೋ-ಆಪರೇಶನ್ ಸಂಸ್ಥೆಯು ನೀರು ಸರಬರಾಜು ವಿಭಾಗಕ್ಕೆ ರೂ. 1750 ಕೋಟಿ ಹಣಕಾಸು ನೆರವಿನಿಂದ ಕೈಗೆತ್ತಿಕೊಳ್ಳಲಾಗಿದೆ. ಈ ಸಂಬಂಧವಾಗಿ ಭಾರತ ಸರ್ಕಾರ ಹಾಗೂ ಜಪಾನಿನ ಸರ್ಕಾರ ದಿನಾಂಕ 31-03-2005 ಮತ್ತು 31-03-2006 ರಂದು ಒಪ್ಪಂದಕ್ಕೆ ಸಹಿ ಹಾಕಿವೆ. ಈ ಹಣಕಾಸಿನ ನೆರವಿನ ಅವಧಿ 10 ವರ್ಷಗಳಾಗಿರುತ್ತದೆ.

196 ಶ್ರೀ ಸುಭಾಷ್ ಗುತ್ತೇದಾರ್(ಆಳಂದ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ಕಟ್ಟಡಕ್ಕೆ ಮಂಜೂರಾಗಿರುವ ಅನುದಾನ ಎಷ್ಟು ಮತ್ತು ಯಾವ ವರ್ಷದಲ್ಲಿ ಬಿಡುಗಡೆಯಾಗಿದೆ;

ಆ) ಅನುದಾನ ಬಿಡುಗಡೆಯಾಗಿದ್ದಲ್ಲಿ ಈವರೆವಿಗೂ ಕಾಮಗಾರಿ ಪ್ರಾರಂಭಿಸಲು ವಿಳಂಬವಾಗಲು ಕಾರಣಗಳೇನು; (ವಿವರಗಳನ್ನು ನೀಡುವುದು);

ಇ) ಕಟ್ಟಡದ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು; ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕಾಲಮಿತಿ ಯನ್ನೇನಾದರೂ ನಿಗದಿಪಡಿಸಿದೆಯೇ;

ಈ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಗುಲಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ಕಟ್ಟಡ ನಿರ್ಮಾಣ ಕಾಮಗಾರಿಯು 2008-09ನೇ ಸಾಲಿನ ಆಯವ್ಯಯದಲ್ಲಿ ರೂ.150-00 ಲಕ್ಷಗಳ ಅಂದಾಜಿಗೆ ರೂ.45-00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಆ) ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಸ್ಥಳಾವಕಾಶವಿಲ್ಲದ ಕಾರಣ ವಿಳಂಬವಾಗಿದೆ. ಪ್ರಸ್ತುತ ಆಳಂದ್‌ದಲ್ಲಿ ಹಳೆ ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ಸ್ಥಳಾವಕಾಶ ಮಾಡಿಕೊಡಲಾಗಿದ್ದು ಸ್ಥಳಾವಕಾಶ ಮಾಡಿಕೊಡಲಾದ ಜಾಗದಲ್ಲಿ ಹಳೆಯ ಕಟ್ಟಡಗಳನ್ನು ಕೆಡವಲು ಮಿನಿ ವಿಧಾನಸೌಧ ಕಾಮಗಾರಿಯನ್ನು ಕಂದಾಯ ಇಲಾಖೆಯಿಂದ ಮಂಜೂರಾತಿ ನೀಡಿದ್ದಲ್ಲಿ ಕಾಮಗಾರಿಯನ್ನು ಟೆಂಡರ್ ಪ್ರಕ್ರಿಯೆ ಮುಖಾಂತರ ಕೈಗೊಳ್ಳಲಾಗುವುದು.